ತಮಿಳುನಾಡಿನ ನಾಯನಾರ್ ಸಂತರು – ೧೨

# ಗುರು ನಮಶ್ಶಿವಾಯ

ಕಥೆ : ಎಂ. ಜಯಶ್ರೀ


ಚಿತ್ರ : ಶಂಕರ್

**1** ಚಿದಂಬರಂನ ಮೂರು ಸಾವಿರ ಬ್ರಾಹ್ಮಣರಲ್ಲಿ ಜೀವನ್ಮುಕ್ತ, ಜಡಮುಕ್ತ ಹಾಗೂ ಮಹಾಮುಕ್ತ – ಇವರು ಬಹಳ ಪ್ರಸಿದ್ಧರಾದವರು. ಒಂದು ದಿನ ನಟರಾಜ ಶಿವನು ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡ.





ಶಿವನು ಹೇಳಿದ ಸ್ಥಳಕ್ಕೆ ಗುರುನಮಶ್ಶಿವಾಯನನ್ನು ಕರೆತರಲು ಆ ಮೂವರು ಬ್ರಾಹ್ಮಣರು ಹೊರಟರು.

**2** ಗುರುನಮಶ್ಶಿವಾಯ ಯಾವಾಗಲೂ ಗಾಢ ಧ್ಯಾನದಲ್ಲಿ ಮುಳುಗಿರುತ್ತಿದ್ದ. ಅವನ ದರ್ಶನ ಪಡೆಯಲು ಬಂದ ಭಕ್ತರು ಅವನ ಮುಂದೆ ಅಪಾರ ಚಿನ್ನಾಭರಣಗಳನ್ನು ಇಡುತ್ತಿದ್ದರು.





ನಾನು ಇಲ್ಲಿ ತಂಗಿರುವುದು ಶಿವನ ಆಜ್ಞೆಗೆ ಅನುಸಾರವಾಗಿ. ನಾನು ಬೇರೆ ಕಡೆಗೆ ಹೋಗಿ ನೆಲೆಸಲಾರೆ.

**3** ಮೂವರು ಬ್ರಾಹ್ಮಣರು ಅಲ್ಲಿ ನಡೆದುದನ್ನು ಶಿವನಿಗೆ ತಿಳಿಸಿದರು.





ಶಿವನು ದಂಡ, ಕಮಂಡಲು ಹಿಡಿದಿದ್ದ ಒಬ್ಬ ವೃದ್ಧನಂತೆ ಗುರುನಮಶ್ಶಿವಾಯನ ಮುಂದೆ ಕಾಣಿಸಿಕೊಂಡ.


4
ನಮಸ್ಕಾರ, ಸ್ವಾಮಿಗಳೆ. ನೀವೆಲ್ಲಿಂದ ಬಂದಿರಿ? ನಿಮ್ಮ ಹೆಸರೇನು? ನಿಮಗೆ ನಾನು ಯಾವ ರೀತಿ ಸೇವೆ ಮಾಡಲಿ?
ನಾನು ಚಿದಂಬರಂನಲ್ಲಿ ನೆಲೆಸಿದ್ದೇನೆ. ನನ್ನ ಹೆಸರು ಅಂಬಲ ತ್ತಾಡುವನ್ ಎಂದು. ನಾನು ಭಿಕ್ಷೆ ಬೇಡಲು ಬಂದಿದ್ದೇನೆ.
5
ಸ್ವಾಮಿ, ನನ್ನ ಬಳಿ ನಿಮಗೆ ಆಹಾರ ನೀಡಲು ಒಂದು ಪಾತ್ರೆಯೂ ಇಲ್ಲವಲ್ಲ? ನನಗೆ ತಾಯಿ ಶಿವಕಾಮಿ (ಪಾರ್ವತಿ)ಯೇ ಪ್ರತಿದಿನ ಆಹಾರ ನೀಡುವಳು.
ಆ ವೃದ್ಧನು ಕೂಡಲೇ ಚಂದ್ರನನ್ನು ಒಂದು ಪಾತ್ರೆಯನ್ನಾಗಿ ಮಾಡಿ, ಅವನಿಂದ ಭಿಕ್ಷೆ ಬೇಡಿದ. ಗುರುನಮಶ್ಶಿವಾಯನು ಜಗನ್ಮಾತೆಯನ್ನು ಪ್ರಾರ್ಥಿಸಿದ. ಆಗ ಅವಳು ಅವನಿಗೆ ಆಹಾರ ನೀಡಿದಳು.
ಸ್ವಾಮಿ, ದಯವಿಟ್ಟು ಈ ಆಹಾರವನ್ನು ಸ್ವೀಕರಿಸಿ.
6
ನನಗೆ ನೀನು ಪ್ರತಿದಿನವೂ ಆಹಾರ ನೀಡುವುದಿದ್ದರೆ ಮಾತ್ರ ಇದನ್ನು ನಾನು ಸ್ವೀಕರಿಸುತ್ತೇನೆ.
ಸ್ವಾಮಿ, ಪ್ರತಿದಿನವೂ ನಾನು ಹೇಗೆ ಕೊಡಲಿ? ನಾಳೆ ಎಲ್ಲಿರುತ್ತೇನೆ ಎಂಬುದೇ ನನಗೆ ತಿಳಿದಿರುವುದಿಲ್ಲ.
ನೀನು ಯಾವ ದಿಕ್ಕಿಗೆ ಹೋದರೂ ಸರಿ, ನಿನ್ನ ಎದುರಿಗೆ ನಾನು ಬಂದಾಗ ನನಗೆ ಆಹಾರ ಕೊಡು. ನಿನ್ನ ಹಿಂದಿನಿಂದ ಬಂದರೆ ಆಹಾರ ಕೊಡಬೇಡ.
ಆಗಲಿ ಸ್ವಾಮಿ, ಇದನ್ನು ಈಗ ಸ್ವೀಕರಿಸಿ.
ನೀನು ಧರಿಸಿದ ರುದ್ರಾಕ್ಷಿ ಮತ್ತು ಭಸ್ಮವನ್ನು ಸ್ಪರ್ಶಿಸಿ ಇದನ್ನು ಕೊಡುವುದಾಗಿ ಮಾತು ಕೊಟ್ಟರೆ ಮಾತ್ರ ನಾನು ಸ್ವೀಕರಿಸುತ್ತೇನೆ.
ಆಗಲಿ ಸ್ವಾಮಿ, ನಾನು ಮಾತು ಕೊಡುತ್ತೇನೆ.
7
ಶಿವನು ಮತ್ತೆ ಬ್ರಾಹ್ಮಣರಿಗೆ ಹೇಳಿದ.....
ಗುರುನಮಶ್ಶಿವಾಯನನ್ನು ದೇವಾಲಯಕ್ಕೆ ಕರೆದುಕೊಂಡು ಬರುವಂತೆ ಅವನನ್ನು ಸಿದ್ಧಗೊಳಿಸಿದ್ದೇನೆ. ನೀವೆಲ್ಲರೂ ಪಲ್ಲಕ್ಕಿ ತೆಗೆದುಕೊಂಡು ಹೋಗಿ, ಅವನನ್ನು ನನ್ನ ಬಳಿಗೆ ಕರೆತನ್ನಿ.


8
ಸ್ವಾಮಿ, ನಿನ್ನೆ ನಿಮ್ಮೊಂದಿಗೆ ಮಾತನಾಡಿದವನು ಸಾಕ್ಷಾತ್ ಶಿವನೇ. ಅವನ ಆಜ್ಞೆಯಂತೆ ನಾವು ನಿಮ್ಮನ್ನು ಚಿದಂಬರಂಗೆ ಕರೆದುಕೊಂಡು ಹೋಗಲು ಬಂದಿದ್ದೇವೆ.
ಗುರುನಮಶ್ಶಿವಾಯ ತನ್ನ ಯೋಗದೃಷ್ಟಿಯಿಂದ ಅದು ಸತ್ಯವೆಂದು ಅರಿತ.
ಆಹ! ಶಿವನು ನನ್ನೊಂದಿಗೆ ಮಾತನಾಡಿದನೆಂದು ಅವನೇ ನಿಮಗೆ ಹೇಳಿದನೇ?
9
ಪಲ್ಲಕ್ಕಿಯ ಮೂಲಕ ದೇವಾಲಯವನ್ನು ಪ್ರವೇಶಿಸಿದ ಗುರುನಮಶ್ಶಿವಾಯನು ನಟರಾಜ ಶಿವನ ದರ್ಶನ ಪಡೆದ.
ಎಲ್ಲ ಜನರ ಸೇವೆ ಮಾಡಬೇಕೆಂಬುದೇ ಆಜ್ಞೆ!
ಭಗವಂತ! ನೀನು ಭಿಕ್ಷೆ ನೀಡಿದರೆ ನಿನ್ನ ಆಜ್ಞೆಯನ್ನು ಎಂದೆಂದಿಗೂ ಪಾಲಿಸಲಾಗುವುದು.
10
ಗುರುನಮಶ್ಶಿವಾಯನು ಕೈಯಲ್ಲಿ ಚಿನ್ನದ ತಟ್ಟೆಯನ್ನು ಹಿಡಿದು ಶಿವನ ಸ್ತೋತ್ರವನ್ನು ಮಾಡತೊಡಗಿದ. ಶಿವನ ಕೈಯಿಂದ ತಟ್ಟೆಗೆ ಒಂದು ಚಿನ್ನದ ನಾಣ್ಯ ಬಿತ್ತು.
ಆಹಾ! ಏನದ್ಭುತ!
11
ನಾವು ನೋಡುತ್ತಿರುವಾಗಲೇ ನಟರಾಜ ಶಿವನು ಭಿಕ್ಷೆ ನೀಡಿದ. ಆದ್ದರಿಂದ ನಾವೆಲ್ಲರೂ ದೇವಾಲಯಕ್ಕೆ ಚಿನ್ನ, ಬೆಳ್ಳಿ, ಮುತ್ತು, ರತ್ನಾದಿ ಆಭರಣಗಳನ್ನು ನೀಡಬೇಕು.
ಹಿಂದೆ ಎಂದಾದರೂ ಶಿವನಿಗೆ ಆಭರಣ ಹಾಕಿ ಅಲಂಕಾರ ಮಾಡಿದ್ದಿದೆಯೆ?
ಇಲ್ಲ, ಸ್ವಾಮಿ! ಪತಂಜಲಿ ಮುನಿಯ ಕಾಲಕ್ಕೆ ಕಡಗ ಇತ್ಯಾದಿ ಆಭರಣಗಳಿದ್ದವಂತೆ. ಆದರೆ ನಾವು ಮಾತ್ರ ಏನನ್ನೂ ನೋಡಿಲ್ಲ.


12

ಅಕ್ಕಸಾಲಿಗರನ್ನು ಕರೆಸಲಾಯಿತು.





ಗುರುನಮಶ್ಶಿವಾಯ ಮಾಡಿಸಿದ ಆಭರಣಗಳನ್ನು ಧರಿಸಿ ಅವನ ಮುಂದೆ ನಾಟ್ಯವಾಡುವನು ಎಂದು ಹೇಳುತ್ತ ಕೆಲವರು ಅವನನ್ನು ಟೀಕಿಸುತ್ತಿದ್ದುದು ಅವನ ಗಮನಕ್ಕೆ ಬಂತು. ನಲುವತ್ತು ದಿನಗಳಾದ ಮೇಲೆ, ಅಕ್ಕಸಾಲಿಗರು ಆಭರಣ ಗಳನ್ನು ಸಿದ್ಧಪಡಿಸಿ ತಂದರು.

13




14

ಗುರುನಮಶ್ಶಿವಾಯನು ನಟರಾಜನನ್ನು ಎಲ್ಲ ಆಭರಣ ಗಳಿಂದ ಸಿಂಗರಿಸಿದನು. ಬಳಿಕ ನಾಟ್ಯವಾಡುವಂತೆ ಅವನನ್ನು ಪ್ರಾರ್ಥಿಸಿದ. ನಟರಾಜನ ನಾಟ್ಯ ಆರಂಭವಾಯಿತು. ಬಹಳ ದೀರ್ಘಕಾಲ ಅವನು ನರ್ತಿಸಿದ. ಕೆಲವು ಮಂದಿ ಅರ್ಚಕರಿಗೆ ಚಿಂತೆಯುಂಟಾಯಿತು. ಶಿವನ ನಾಟ್ಯವನ್ನು ಹೇಗೆ ನಿಲ್ಲಿಸುವುದು ಎಂದು.




ಭಕ್ತಿಪೂರಿತವಾದ ಗುರುನಮಶ್ಶಿವಾಯನ ಸ್ತುತಿಯನ್ನು ಕೇಳಿದಾಗ ನಟರಾಜನು ದಿವ್ಯ ನರ್ತನವನ್ನು ನಿಲ್ಲಿಸಿದ.

15

ಗುರುನಮಶ್ಶಿವಾಯನು ಭಕ್ತಿಯನ್ನೇ ಅವಲಂಬಿಸಿ ತನ್ನ ಕಾಲದಲ್ಲಿ ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ. ಅವನ ಕಾಲದಲ್ಲಿ ಶೈವ ಸಂಪ್ರದಾಯ ಸಮೃದ್ಧಗೊಂಡಿತು. ಬಹಳ ದೀರ್ಘಕಾಲ ಜೀವಿಸಿದ ನಂತರ ಅವನು ತಿರುಪ್ಪೆರುಂದುರೈನಲ್ಲಿ ಶಿವನಲ್ಲಿ ಲೀನವಾದನು.